ಶ್ರೀ ಬಿ.ಎಸ್. ಯಡಿಯೂರಪ್ಪ.—ಕೇವು ಕಡೆ ಕೊಟ್ಟಿದ್ದೇವೆಂದು ಹೇಳಿದ್ದಾರೆ, ಅಲ್ಲಿ ಹಸಿರಂ ಬಣ್ಣದ ರೆಕ್‌ಜಿನ್ ಅಡ್ಡಿಬರಲಿಲ್ಲವೆ ? ಆದಷ್ಟು ಬೇಗ ವಿತರಣೆ ಮಾಡಿ ರೈತರಿಗೆ ಅನುಕೂಲ ಮಾಡಿ ಕೊಡುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಆಯಿತು.

ಸಿಂಧನೂರು ಕೆ, ಹೊಸಹಳ್ಳಿಯಂಲ್ಲಿ ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿರುವುದು.

೩೦೬೧.*ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರು ವೀರಕಲ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕು ಕೆ. ಹೊಸಹಳ್ಳಿಯಲ್ಲಿ ಆರು ಜನ ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಬಿ) ಅಪರಾಧಿಗಳ ಹೆಸರು ಮತ್ತು ಸದರಿ ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಲು ಕಾರಣರಾದವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಸಿ) ಇಲ್ಲಿಯವರೆಗೆ ಕ್ರಮ ತೆಗೆದುಕೊಂಡಿರದಿದ್ದರೆ ಸರ್ಕಾರವು ತಕ್ಷಣವೇ ಆರೋಪಿಗಳನ್ನು ಪ್ರಾಸಿಕ್ಯೂಟ್ ಮಾಡಲು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಎ) ನಾಲ್ವರು ಮಹಿಳೆಯರನ್ನು ಬೆತ್ತಲೆ ಮಾಡಲಾಯಿತೆಂದೂ ಮತ್ತು ಆ ನಾಲ್ಕೂ ಜನರ ಪೈಕಿ ಒಬ್ಬ ಮಹಿಳೆ ತಪ್ಪಿಸಿಕೊಂಡು ಓಡಿ ಹೋದಳೆಂದು ವರದಿಯಾಗಿದೆ.

ಬಿ) ಅಪರಾಧಿಗಳ ಹೆಸರು

೧	ಮೃತ ನಾಗಪ್ಪನ ಹೆಂಡತಿ ಲಚ್ಚಮವ್ವ
೨	ದೊಡ್ಡಬಸಪ್ಪನ ಹೆಂಡತಿ ಪಾರತವ್ವ
೩	ಸಣ್ಣಬಸಪ್ಪನ ಹೆಂಡತಿ ಬಾಲವ್ವ
೪	ದುರಗಪ್ಪನ ಹೆಂಡತಿ ಲಚ್ಚಮವ್ವ
೫	ಯಮನಪ್ಪನ ಹೆಂಡತಿ ಬಸವ್ವ
೬	ಮೃತ ನಾಗಪ್ಪನ ಅತ್ತೆ ದೇವಕಮ್ಮ
೭	ದೊಡ್ಡಬಸಪ್ಪ ತಂದೆ ಈರತಪ್ಪ ತಳವಾರ್
೮	ಸಣ್ಣಬಸಪ್ಪ ತಂದೆ ಈರಪ್ಪ ತಳವಾರ
೯	ಯಮನಪ್ಪ ತಂದೆ ಅಳ್ಳಪ್ಪತಳವಾರ್
೧೦	ದುರಗಪ್ಪ ತಂದೆ ಪಂಪಣ್ಣ ತಳವಾರ್
೧೧	ಪಂಪಯ್ಯಸ್ವಾಮಿ ತಂದೆ ಪತ್ರಯ್ಯ
೧೨	ಈರಪ್ಪ ತಂದೆ ಫಕೀರಪ್ಪ ತಳವಾರ್
೧೩	ಕಂಪಲಪ್ಪನ ಹೆಂಡತಿ ನಿಂಗವ್ವ
೧೪	ಯಮನಪ್ಪನ ಹೆಂಡತಿ ಈರವ್ವ
೧೫	ಸಿದ್ಧಪ್ಪನ ಮಗ ಕರಿಯಪ್ಪ
೧೬	ಈರಪ್ಪನ ಮಗ ಫಕೀರ ನಾಯಕ್

ಆರೋಪಿಗಳಲ್ಲಿ ೧ ರಿಂದ ೧೦ ಆರೋಪಿಗಳನ್ನು ಬಂಧಿಸಲಾಗಿದೆ. ಇವರಲ್ಲಿ ಆರು ಜನ ಮಹಿಳೆಯರು ನ್ಯಾಯಾಲಯದಲ್ಲಿ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದಾರೆ. ಉಳಿದ ೫ ಜನ ಗಂಡಸರು ನ್ಯಾಯಾಂಗ ಕಸ್ಟಡಿಯಲ್ಲಿದ್ದಾರೆ. ಉಳಿದವರನ್ನು ದಸ್ತಗಿರಿ ಮಾಡಿ ದೋಷಾರೋಪಣೆ ಸಲ್ಲಿಸಲಾಗುತ್ತಿದೆ.

ಸಿ. ಪ್ರಶ್ನೆ ಬಿಡುವುದರಿಂದ ಉತ್ತರಿಸಿರುವುದರಿಂದ ಉದ್ಭವಿಸುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಮುಖ್ಯವಾಗಿ ಇದನ್ನು ಕೇಳತಕ್ಕ ಉದ್ದೇಶ ಇಷ್ಟೇ. ಇದನ್ನು ನೋಡಿದರೆ ಬಹುಶಃ ಇದು ಮನೆ ಜಗಳ ಎಂದು ಕಾಣುತ್ತದೆ. ಇದರ ವಿಷಯವನ್ನು ನಾನು ಪ್ರಜಾವಾಣಿಯಲ್ಲಿ ನೋಡಿದೆ. ಇದು ಒಂದು ಫ್ಯಾಮಿಲಿ ಡಿಸ್‌ಪ್ಯೂಟ್ ಇದೆ. ಇದು ದೊಡ್ಡದಾಗಿ ಆನೇಕ ಕಡೆ ಬಂದಿತ್ತು. ಇದರಲ್ಲಿ ಸರ್ಕಾರದವರೂ ಕೂಡಾ ಪೋಲೀಸರ ಮೇಲೆ ಆಕ್ಷನ್ ತೆಗೆದುಕೊಂಡಿದ್ದಾರೆಂದು ಗೊತ್ತಾಗಿದೆ. ನಾನು ಕೇಳುವುದು ಇಷ್ಟೇ. ಅನೇಕ ಕಡೆ ಇಂಥ ಮನೆ ಡಿಸ್‌ಪ್ಯೂಟ್ ತಂದು ಶಾಂತಿಭಂಗ ಮಾಡಿ ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದಾರೆ. ಈ ಕಾರಣದಿಂದ ಎಕ್ಸ್‌ಪ್ಲಾಯಿಟ್ ಮಾಡಿ ಇದನ್ನು ಹೈಲೈಟ್ ಮಾಡಿ ಯಾರ ಯಾರ ಮೇಲೆ ತಮ್ಮ ಸಿಟ್ಟು ತೀರುತ್ತದೆ ಅದನ್ನು ತೀರಿಸಿಕೊಳ್ಳುವುದಕ್ಕೆ ಈ ರೀತಿ ಮಾಡುತ್ತಿದ್ದಾರೆ. ಎರಡನೆಯದಾಗಿ ಇಂತಹ ಅನ್ಯಾಯ ಆದರೂ ಕೂಡಾ ನಡೆದಿಲ್ಲ ಎನ್ನುವ ಅಪವಾದ ಇದೆ. ಸರ್ಕಾರವೂ ಕೂಡಾ ಬೇರೆ ಕಡೆ ಈ ರೀತಿ ನಡೆಯದಿರುವ ರೀತಿಯಲ್ಲಿ ನೋಡಿಕೊಳ್ಳುತ್ತದೆಯೇ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಈ ಕೆ. ಹೊಸಹಳ್ಳಿಯಲ್ಲಿ ಘಟನೆ ಆದಮೇಲೆ ನಾನು ಅಲ್ಲಿಗೆ ಭೇಟಿ ಕೊಟ್ಟಿದ್ದೇನೆ. ಸ್ಥಳೀಯ ಶಾಸಕರೂ ಕೂಡಾ ನನ್ನ ಜೊತೆ ಬಂದಿದ್ದರು. ಖರ್ಗೆಯವರು ಹೇಳಿದ ಹಾಗೆ ಇದರಲ್ಲಿ ಸತ್ಯಾಂಶ ಇದೆ. ಆ ಒಂದು ಹಿನ್ನೆಲೆ ಸ್ವಲ್ಪ ಇರುವುದರಿಂದ ಅಲ್ಲಿನ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅವರು ತಕ್ಷಣ ಕೆಲವು ಅಧಿಕಾರಿಗಳ ಮೇಲೂ ಕ್ರಮ ತೆಗೆದುಕೊಂಡಿದ್ದಾರೆ. ಇಲ್ಲಿನ ಘಟನೆಯ ಹಿನ್ನೆಲೆಯನ್ನು ನಾನು ತಿಳಿದುಕೊಂಡು ಬಂದು ಹೇಳಿದಮೇಲೆ ಸಿಓಡಿ ಎನ್‌ಕ್ವೈರಿ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಬೆತ್ತಲೆ ಮೆರವಣಿಗೆಗೆ ಒಳಗಾದ ಹೆಣ್ಣುಮಕ್ಕಳಿಗೆ ಗೌರವದಿಂದ ಬಾಳುವುದಕ್ಕೆ ಅವಕಾಶವಾಗಬೇಕು ಎನ್ನುವ ದೃಷ್ಟಿಯಿಂದ ಸ್ಥಳೀಯ ಅಧಿಕಾರಿಗಳನ್ನು ಕರೆಯಿಸಿ ಜಿಲ್ಲಾಪರಿಷತ್ತಿನ ಅಧ್ಯಕ್ಷರ ಜೊತೆ ಸಮಾಲೋಚನೆ ಮಾಡಿ ಅವರಿಗೆ ಸೈಟು ಕೊಡುವುದಕ್ಕೆ ಮನೆ ಕೊಡುವುದಕ್ಕೆ ಹಾಗೂ ವ್ಯವಸಾಯಕ್ಕೆ ಬೇಕಾಗುವ ಇತರ ಸೌಲಭ್ಯಗಳನ್ನು ಕೊಡುವುದಕ್ಕಾಗಿ ನೇರೆ ಬೇರೆ ಇನ್‌ಪೆಕ್ಷನ್‌ಗಳಿಂದಿಗೆ ಕೂಡಾ ಮಾತನಾಡಿ ಸೂಕ್ತ ವ್ಯವಸ್ಥೆ ಮಾಡಿ ಬಂದಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಆಗಸ್ಟ್ ೧೧ನೇ ತಾರೀಖು ಮರ್ಡರ್ ಆಗಿದೆ. ಈ ಪಾರತಮ್ಮ ಬಾಲಮ್ಮ, ಲಚ್ಚಮ್ಮ ಇವರೆಲ್ಲಾ ಊರಿನಲ್ಲಿ ಇರಲಿಲ್ಲ. ಸಬ್ ಇನ್ಸ್‌ಪೆಕ್ಟರ್ ಇವರನ್ನು ಕರೆಯಿಸಿ ನಿಮಗೆ ಪ್ರೊಟೆಕ್ಷನ್ ಕೊಡುತ್ತೇವೆಂದು ಹೇಳಿದ ಮೇಲೆ ಇವರು ಬಂದಿದ್ದು ನಂತರ ಸಬ್ ಇನ್ಸ್‌ಪೆಕ್ಟರ್ ಪ್ರೊಟೆಕ್ಷನ್ ಕೊಡದೆ ಹೋದಮೇಲೆ ಈ ೪ ಜನರನ್ನು ಬೆತ್ತಲೆ ಮಾಡಿ ಜಾತ್ರೆಯಲ್ಲಿ ಮೆರವಣಿಗೆ ಮಾಡಿದ್ದಾರೆ.

ಅಧ್ಯಕ್ಷರು :— ತಾವು ಪ್ರಶ್ನೆ ಕೇಳಿ

ಶ್ರೀ ಆರ್. ವೆಂಕಟರಾಮಯ್ಯ.—ಅವರಿಗೆ ಪ್ರೊಟೆಕ್ಷನ್ ಕೊಡುತ್ತೇವೆಂದು ಹೇಳಿ ೩೦ನೇ ತಾರೀಖು ಅವರನ್ನು ಕರೆಯಿಸಿದಮೇಲೆ ಅವರ ಬೆತ್ತಲೆ ಮೆರವಣಿಗೆ ಮಾಡಲಾಗಿದೆ. ಇದಕ್ಕೆ ನಾವು ತಲೆ ತಗ್ಗಿಸಬೇಕಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇದರಲ್ಲಿ ಪಕ್ಷದ ಹಿನ್ನೆಲೆ ಯಾವುದೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರು ತಪ್ಪು ಮಾಹಿತಿಯನ್ನು ಹೊಂದಿರುತ್ತಾರೆ. ವಾಸ್ತವಿಕವಾಗಿ ಆಶ್ಚರ್ಯಪಡತಕ್ಕ ಸಂಗತಿಯೇನೆಂದರೆ ಯಾರು ಬೀದಿಯಲ್ಲಿ ಬೆತ್ತಲೆ ಮೆರವಣಿಗೆಗೆ ತುತ್ತಾಗಿರುತ್ತಾರೆ ಅವಳ ತಂದೆಯೇ ಇಂತಹ ನೀಚ ಕೆಲಸವನ್ನು ಮಾಡಿರತಕ್ಕದ್ದು ನಿಜ. ಇದರಲ್ಲಿ ಪಕ್ಷದ ಮಗದೊಂದು ಹಿನ್ನೆಲೆಯಿಲ್ಲ. ಬೆತ್ತಲೆ ನಡೆಯುವಾಗ ಪೋಲೀಸರು ಅಲ್ಲಿದ್ದರು ಅವರು ರಕ್ಷಣೆ ಕೊಡಬೇಕಾಗಿತ್ತು ಎಂದು ಹೇಳಿದ್ದಾರೆ. ಅಲ್ಲಿ ಕೊಲೆಯಾದಾಗ ೨೨ ದಿವಸ ಪೋಲೀಸರನ್ನು ಇಟ್ಟಿದ್ದಾರೆ. ಅವತ್ತಿನ ದಿವಸ ಡಿ ವೈ. ಎಸ್. ಪಿ. ಇದ್ದದ್ದು ಪೆರೇಡ್ ಮಾಡಿಸಲಿಕ್ಕೆ ಪೋಲೀಸರನ್ನು ಕರೆಯಿಸಿದಂತಹ ಸಂದರ್ಭದಲ್ಲಿ ಬೆತ್ತಲೆಗೆ ಒಳಗಾದ ಹೆಣ್ಣುಮಗಳ ತಂದೆಯೇ ಇಂತಹೀನಕಾರ್ಯವನ್ನು ಮಾಡಿದ್ದಾನೆ, ಆ ದಿನ ಯಾವುದೇ ಜಾತ್ರೆ ಇರಲಿಲ್ಲ. ಬೆತ್ತಲೆಗೊಳಿಸಿದ ಹೆಣ್ಣುಮಕ್ಕಳನ್ನು ಊರಿನ ಎಸಡು ಲೋಮಿಟರ್ ದೂರ ಓಡಿಸಿಕೊಂಡು ಹೋಗಿರತಕ್ಕದ್ದು ನಿಜ ಸಂಗತಿ.

ಶ್ರೀ ಆರ್, ವೆಂಕಟರಾಮಯ್ಯ.—ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರು ತಾವು ಕುಳಿತುಕೊಳ್ಳಿ. ತಮಗೆ ಎಷ್ಟು ಸಾರಿ ಹೇಳಬೇಕು ? ಮಾನ್ಯ ಎನ್. ಹೆಚ್. ಗೌಡರು ತಮ್ಮ ಪ್ರಶ್ನೆಯನ್ನು ಕೇಳಿ.

SRI F. G. R. SINDHIA.—We have already suspended the Sub-Inspector and the Circle Inspector and we have ordered for a C.O.D. and enquiry What else the Government can do ?

ಉತ್ತರ ಕನ್ನಡ ಜಿಲ್ಲೆಯಲ್ಲಿ ವೈದ್ಯರ ಕೊರತೆ.

೨೮೯೧. ಶ್ರೀ ಎನ್. ಹೆಚ್. ಗೌಡ (ಕುಮಟಾ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಅನೇಕ ಸರ್ಕಾರದ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ.

ಆ) ವೈದ್ಯರ ಕೊರತೆಯನ್ನು ತುಂಬಲು ಸರಕಾರದವರು ಕೈಗೊಂಡಿರುವ ಕ್ರಮವೇನು.

ಇ) ಸದರಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಲೋಕಸೇವಾ ಆಯೋಗದಿಂದ ಆಯ್ಕೆಯಾದ ಪುರುಷ ಮಹಿಳಾ ವೈದ್ಯಾಧಿಕಾರಿಗಳಲ್ಲಿ ದಿನಾಂಕ ೯-೮-೧೯೮೮ ರಂದು ಹೊರಡಿಸಿದ ಸರ್ಕಾರದ ಆದೇಶದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಿಗೆ ೧೧ ವೈದ್ಯಾಧಿಕಾರಿಗಳನ್ನು ನೇಮಿಸಲಾಗಿದೆ.

ಇ) ಉತ್ತರ ಕನ್ನಡ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಇನ್ನುಳಿದ ೧೪ ಖಾಲಿ ಹುದ್ದೆಗಳನ್ನು ಆದಷ್ಟು ಬೇಗ ತುಂಬಲಾಗುವುದು.

ಶ್ರೀ ಎನ್. ಹೆಚ್. ಗೌಡ.—ಮಾನ್ಯ ಅಧ್ಯಕ್ಷರೆ, ದಿನಾಂಕ ೯-೮-೧೯೮೮ ರಂದು ೧೧ ಜನ ಮಹಿಳಾ ಹಾಗೂ ಪುರುಷ ವೈದ್ಯರನ್ನು ನೇಮಿಸಿದ್ದುದು ಸತ್ಯ. ಮಾನ್ಯ ಸಚಿವರು ಆಡಿದ ಮಾತು ಸತ್ಯ ಆದರೆ ಒಂದು ಸಂಗತಿಯಿದೆ. ಸರ್ಕಾರ ಯಾವ ವೈದ್ಯರನ್ನು ನೇಮಿಸಿದರೂ ಆ ವೈದ್ಯರು ನೇಮಿಸಿದಂತಹ ದಾಪಾಖಾನೆಗೆ ಹೋಗಿ ತಮ್ಮ ಕೆಲಸ ನಡೆಸಿದ್ದಾರೆಯೇ ಎನ್ನುವುದು. ಉದಾಹರಣೆಗೆ ಹೇಳುವುದಾದರೆ ನನ್ನ ಮತದಾರರ ಕ್ಷೇತ್ರವಾದ ಗೋಕರ್ಣ ಹಿರೇಗುತ್ತಿ ಹಾಗೂ ಕುಮಟಾ ಈ ಮೂರು ಕಡೆಗಳಿಗೆ ಮೂರು ಮಹಿಳಾ ವೈದ್ಯರನ್ನು ನೇಮಿಸಲಾಗಿತ್ತು ಆವರು ಅಲ್ಲಿಗೆ ಬಂದು ಕೆಲಸಕ್ಕೆ ಸೇರಿಕೊಳ್ಳಲಿಲ್ಲ. ಹಾಗಾಗಿ ಕುಮಟಾದಲ್ಲಿ ಪರಿಸ್ಥಿತಿ ಬಹಳ ಬಿಗಡಾಯಿಸುತ್ತಾ ಉಂಟು. ಕುಮಟಾದಲ್ಲಿ ನಾಲ್ಕು ವೈದ್ಯರು ಇರಬೇಕಾಗಿತ್ತು ಈಗ ಅಲ್ಲಿ ಒಬ್ಬ ವೈದ್ಯರು ಕೆಲಸ ಮಾಡುತ್ತಿದಾರೆ. ಆ ವೈದ್ಯರು ಎಷ್ಟು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆಂದರೆ ಮುಂಜಾನೆ ೮ ಗಂಟೆಯಿಂದ ರಾತ್ರಿ ೮ ಗಂಟೆಯವರೆಗೆಕೆಲಸಮಾಡ್ತಿದಾವಾಖಾನೆಯಲ್ಲಿ ದುಡಿಯುತ್ತಿದ್ದಾರೆ. ಅವರ ಸ್ಥಿತಿ ಈಗ ಏನಾಗುತ್ತಿದೆ?ಎಂದರೆ ಯಾರು ಜನರ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದರೋ ಆ ವೈದ್ಯರೇ ಅನಾರೋಗ್ಯದಿಂದ ಬಳಲುವಂತಹ ಪರಿಸ್ಥಿತಿ ಬಂದಿದೆ. ಯಾರನ್ನೆ ಹಾಕಲಿ ಅವರು ಆ ಜಾಗದಲ್ಲಿ ಸೇರಿಕೊಳ್ಳದಿದ್ದರೆ ಅಂತಹ ವೈದ್ಯರುಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂಬುದನ್ನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳತಕ್ಕ ಆಸ್ಪತ್ರೆಗಳಿಗೆ ನಾವು ಕಳುಹಿಸಿರತಕ್ಕ ವೈದ್ಯರು ರಿಪೋರ್ಟ್ ಮಾಡಿಕೊಳ್ಳದಿದ್ದರೆ ಅವರ ಮೇಲೆ ಕಾನೂನುಬದ್ಧವಾಗಿ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಅಲ್ಲಿ ಬೇರೆಯವರನ್ನು ಹಾಕಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲ್‌ರವರು ಹೇಳಿದ ಹಾಗೆ ೨೪೨ ವೆಕೆನ್ಸಿಗಳು ಇವೆ. ಅಕ್ಟೋಬರ್‌ನಲ್ಲಿ ಪೋಸ್ಟ್